**ದಿನಾಂಕಃ 08.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ದಿನ ನಾನು ಶ್ರೀನಿವಾಸಪುರದಿಂದ ಚಿಂತಾಮಣಿಗೆ ಸ್ಕೂಟಿಯಲ್ಲಿ ಹೋಗುತ್ತಿದ್ದೆನು. ಸದರಿ ಸ್ಕೂಟಿ ನನ್ನ ಮಗಳ ಹೆಸರಿನಲ್ಲಿದ್ದು, ವಿಮಾ ಪಾಲಿಸಿ ಇರುತ್ತದೆ. ಆರ್.ಸಿ ಮತ್ತು ವಿಮಾ ಪಾಲಿಸಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನಗೆ ಚಾಲನಾ ಪರವಾನಗಿ ಇದೆ, ಅದನ್ನು ಹಾಜರುಪಡಿಸಿದ್ದೇನೆ. ಆ ದಿನ ರಸ್ತೆ ಮಧ್ಯ ಭಾಗದಲ್ಲಿ ನೀವು ಸ್ಕೂಟಿಯನ್ನು ಚಾಲನೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ, ನಾನು ರಸ್ತೆಯ ಎಡಭಾಗದಲ್ಲಿ ಚಾಲನೆ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಿಮ ಸ್ಕೂಟಿಯ ಮುಂಭಾಗವು ಜಖಂಗೊಂಡಿರುತ್ತದೆ ಎಂದರೆ ಸರಿ. ನೀವು ಅತಿವೇಗ ಹಾಗೂ ಅಜಾಗರೂಕತೆಯಿಂದ ಸ್ಕೂಟಿಯನ್ನು ಚಾಲನೆ ಮಾಡಿ ಸ್ವತಃ ಬಿದ್ದು ಅಪಪಘಾತಪಡಿಸಿಕೊಂಡಿದ್ದೀರಿ, ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ.

**2.** ನಾಗೇಶ್ ಎಂಬುವವರು ದೂರು ದಾಖಲಿಸಿದರು. ನಾಗೇಶ್ ರವರು ನನ್ನ ಮೈದುನನಾಗಿದ್ದು. ಅವರು ಅಪಘಾತವನ್ನು ನೋಡಿಲ್ಲ. ಅಪಘಾತವಾದ ಒಂದು ದಿನದ ನಂತರ ದೂರು ದಾಖಲಾಗಿರುತ್ತದೆ ಎಂದರೆ ಸರಿ. ಅಪಘಾತವಾದ ನಂತರ ಚಿಂತಾಮಣಿಯ ಸರ್ಕಾರಿ ಆಸ್ಪತ್ರೆಗೆ ದಾಖಲಾದೆನು. ಅಪಘಾತದ ಬಗ್ಗೆ ವೈದ್ಯರಿಗೆ ತಿಳಿಸಿದೆನು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಸೆಂಟ್ ಜಾನ್ ಆಸ್ಪತ್ರೆಗೆ ದಾಖಲಾದೆನು. ಎರಡು ಆಸ್ಪತ್ರೆಗಳ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಿಮಗೆ ಅಪಘಾತದಿಂದ ಹೆಚ್ಚಿನ ತೊಂದರೆಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಸಣ್ಣ-ಪುಟ್ಟ ಗಾಯಗಳಾಗಿದ್ದವು

ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರವೂ ಸಹ 3 ತಿಂಗಳವರೆಗೆ ಪ್ರತಿನಿತ್ಯ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಚಿಕಿತ್ಸೆಗಾಗಿ 10 ಲಕ್ಷ ರೂ. ವೆಚ್ಚವಾಗಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನಗೆ ಇಎಸ್‌ಐ ವಿಮಾ ಪಾಲಿಸಿ ಇದ್ದ ಕಾರಣ ಅದರ ಮುಖಾಂತರ ಸುಮಾರು 22 ರಿಂದ 23 ಲಕ್ಷ ರೂ.ಗಳನ್ನು ಚಿಕಿತ್ಸಾ ವೆಚ್ಚವಾಗಿ ಪಡೆದುಕೊಂಡಿರುತ್ತೇನೆ. ಆಸ್ಪತ್ರೆಯ ಚಿಕಿತ್ಸಾ ವೆಚ್ಚಕ್ಕಾಗಿ ಖರ್ಚಾದಂತಹ ಒಟ್ಟು ಮೊತ್ತ ಹಾಗೂ ಇಎಸ್‌ಐ ನಿಂದ ಪಡೆದುಕೊಂಡಂತಹ ಒಟ್ಟು ಮೊತ್ತ ಇವುಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

**3.** ನಿ.ಪಿ.11 ರ ಬಿಲ್ಲುಗಳು ಕೆಲವು ಕೈಯಲ್ಲಿ ಬರೆದಿರುವಂತಹ ಬಿಲ್ಲುಗಳಾಗಿದ್ದು, ಕೆಲವು ಜೆರಾಕ್ಸ್ ಪ್ರತಿಗಳಾಗಿವೆ ಎಂದರೆ ಸರಿ. ನಿ.ಪಿ.11 ರಲ್ಲಿನ ಕ್ರಮಸಂಖ್ಯೆ 24 ರಿಂದ 30, 33 ರಿಂದ 39, 42 ರಿಂದ 46, 50, 53 ರಿಂದ 60 ರವರೆಗಿನ ಬಿಲ್ಲುಗಳಲ್ಲಿ ಸೀಲು ಮತ್ತು ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.11 ರಲ್ಲಿನ ಕ್ರಮಸಂಖ್ಯೆ 52 ಬಿಲ್ಲುಗಳು ಅಡ್ವಾನ್ಸ್ ಬಿಲ್ಲುಗಳು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.11 ರಲ್ಲಿನ ಕ್ರಮಸಂಖ್ಯೆ 77 ರಿಂದ 201 ರ ಬಿಲ್ಲುಗಳು ಕೈಯಲ್ಲಿ ಬರೆಯಲಾಗಿದೆ ಎಂದರೆ ಸರಿ. ಬಿಲ್ಲನ್ನು ನೀಡಿರುವವರನ್ನು ನ್ಯಾಯಾಲಯಕ್ಕೆ ಸಾಕ್ಷಿದಾರರನ್ನಾಗಿ ಹಾಜರುಪಡಿಸಲು ಸಾಧ್ಯವೇ ಎಂದರೆ ಸಾಕ್ಷಿಯು ಅವರನ್ನು ಕೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನೀವು ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ prescription ಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಕೆಲವೊಂದು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ವಿಮಾ ಪಾಲಿಸಿಯಿಂದ ಚಿಕಿತ್ಸಾ ವೆಚ್ಚವನ್ನು ಪಡೆದುಕೊಂಡಿದ್ದರೂ ಸಹ ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರಿಕೆಯಲ್ಲಿ ನಮೂದಿಸಿರುವಂತೆ

ನಿಮಗೆ ಯಾವುದೇ ತೊಂದರೆ ಆಗಿರುವುದಿಲ್ಲ, ಮೊದಲಿನಂತೆ ಆರೋಗ್ಯವಾಗಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

(ಓ.ಹೇ.ಕೇ.ಸ.ಇ.)

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.